ಓ.ಎಸ್. ನಂ.  25/2021 ಪಿ.ಡಬ್ಲ್ಯೂ- 1

**ಸಾಕ್ಷಿಯನ್ನು ದಿನಾಂಕ  17.2.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಂ.ಬಿ.ಎಸ್ ವಕೀಲರಿಂದಃ

ನಾನು ದಾವಆಸ್ತಿಗೆ ಹೋಗಿ ನೋಡಿದಾಗ ಒಂದು ತೇಗದ ಮರದಿಂದ ಇನ್ನೊಂದು ತೇಗದ ಮರಕ್ಕೆ 15-20 ಅಡಿ ಅಂತರವಿತ್ತು.  ದಾವಆಸ್ತಿಯಲ್ಲಿ ಎಷ್ಟು ವಿಸ್ತೀರ್ಣದಲ್ಲಿ ವ್ಯವಸಾಯ ಮಾಡಿರುವ ಜಮೀನು ಇತ್ತು ಎಂದು ನಾನು ನೋಡಿರುವುದಿಲ್ಲ.  ಆ ಕಾರಣ ನಾನು ದಾವಆಸ್ತಿಗೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ದಾವಆಸ್ತಿಯ ಬೌಂಡರಿ ಮತ್ತು ಜಮೀನಿನ ಒಳಗೂ ಸಹ ತೇಗದ ಮರಗಳು ಇದ್ದವು.  ಸದರಿ ತೇಗದ ಮರಗಳು ಯಾರಿಗೆ ಸೇರಿರುತ್ತದೆ ಎಂದು ವಿಚಾರಣೆ ಮಾಡಿದ್ದು, ಅದು ಪ್ರತಿವಾದಿಗೆ ಸೇರಿರುತ್ತದೆ ಎಂದು ತಿಳಿಸಿರುತ್ತಾರೆ.  ನಾನು ಪ್ರತಿವಾದಿ, ಅವರ ಮಗ ಹಾಗೂ ಇಬ್ಬರೂ ಮಧ್ಯವರ್ತಿಗಳ ಬಳಿ ಕೇಳಿರುತ್ತೇನೆ.  ಸದರಿ ಮಧ್ಯವರ್ತಿಗಳ ಹೆಸರು ನನಗೆ ಗೊತ್ತಿರುವುದಿಲ್ಲ.  ಪ್ರತಿವಾದಿಯ ಮಗನ ಹೆಸರು ನನಗೆ ಗೊತ್ತಿರುವುದಿಲ್ಲ.  ನಾನು ದಾವಆಸ್ತಿಗೆ ಭೇಟಿ ನೀಡಿದಾಗ ಅದರಲ್ಲಿ ಬಾಳೆ ಮತ್ತು ಕಾಳುಕಡ್ಡಿಯನ್ನು ಬೆಳೆಯಲಾಗಿತ್ತು.  ದಾವಆಸ್ತಿಯಲ್ಲಿ ಪಂಪ್‌ಸೆಟ್ ಇರಲಿಲ್ಲ. ನಾನು ದಾವಪತ್ರದಲ್ಲಿ ದಾವಆಸ್ತಿಯಲ್ಲಿ 200 ತೇಗದ ಮರ ಇರುತ್ತದೆ ಎಂದು ಹೇಳಿರುತ್ತೇನೆ. ಸಾಕ್ಷಿದಾರರು ಮುಂದುವರಿದು ಪ್ರತಿವಾದಿಯರು 250 ತೇಗದ ಮರ ಇರುವುದಾಗಿ ಹೇಳಿರುತ್ತಾರೆ ಎನ್ನುವರು.  ನಾನು ದಾವಜಮೀನನ್ನು ಎರಡು ಗಂಟೆಗಳ ಕಾಲ ನೋಡಿರುತ್ತೇನೆ. ದಾವಆಸ್ತಿಯಲ್ಲಿ ತೇಗದ ಮರಗಳನ್ನು ಹೊರತುಪಡಿಸಿ ಬೇರೆ 2-3 ಜಾತಿಯ ಮರಗಳು ಇದ್ದವು, ಅದರ ಹೆಸರು ಗೊತ್ತಿರುವುದಿಲ್ಲ.  ನಿಪಿ2 ರಲ್ಲಿ ದಾವಆಸ್ತಿಯಲ್ಲಿ ಮಾವು-25, ಹಲಸು-5, ಸಾಗುವನಿ-250, ನೀಲಗಿರಿ-50 ಎಂದು ನಮೂದಾಗಿರುತ್ತದೆ ಎಂದರೆ ಇರಬಹುದು. ದಾವಆಸ್ತಿಯ 2 ಎಕರೆಯಲ್ಲಿ ಮೇಲೆ ಹೇಳಿದಷ್ಟು ಮರಗಳನ್ನು ಬೆಳೆಸಿದರೆ ಬೇರೆ ಬೆಳೆಯನ್ನು ಮಾಡಲು ಸಾಧ್ಯವಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ.  ನಾನು ಮತ್ತು ನನ್ನ ಸ್ನೇಹಿತರು ತೇಗದ ಮರದ ವ್ಯಾಪಾರ ಮತ್ತು ಶುಂಠಿ ಬೆಳೆಯನ್ನು ಬೆಳೆಯುತ್ತೇವೆ ಎಂದರೆ ಸರಿ.  ದಾವಆಸ್ತಿಯ ಪಕ್ಕದಲ್ಲಿ ಖಾಲಿ ಜಮೀನು ಇದ್ದು ಅದರಲ್ಲಿ ಕೇರಳದ ನನ್ನ ಸ್ನೇಹಿತರು ಶುಂಠಿ ಬೆಳೆಯನ್ನು ಬೆಳೆಯುತ್ತಾರೆ ಎಂದರೆ ಸರಿಯಲ್ಲ. ಆ ರೀತಿ ಶುಂಠಿ ಬೆಳೆಯನ್ನು ಬೆಳೆಯಲು ಜಮೀನಿಗೆ ಹೋದಾಗ ಪಕ್ಕದಲ್ಲಿ ತೇಗದ ಮರಗಳು ಇರುವುದು ಗಮನಕ್ಕೆ ಬಂದಿರುತ್ತದೆ ಎಂದರೆ ಸಾಕ್ಷಿದಾರರು ಮಧ್ಯವರ್ತಿ ಹೇಳಿ ಕರೆದುಕೊಂಡು ಹೋಗಿರುತ್ತಾರೆ ಎನ್ನುವರು.  ಶುಂಠಿ ಬೆಳೆ ಮಾಡಲು ನಾನು ಮತ್ತು ನನ್ನ ಸ್ನೇಹಿತರು ಪ್ರತಿವಾದಿಯ ಬಳಿ ಬೋರವೆಲ್ ನೀರನ್ನು ಕೇಳಿರುತ್ತೇವೆ ಎಂದರೆ ಸರಿಯಲ್ಲ. ಆ ರೀತಿ ಬೋರವೆಲ್ ನೀರನ್ನು ಕೇಳಿದಾಗ ನೀರಿಗೋಸ್ಕರ ಪ್ರತಿವಾದಿಯು ಖಾಲಿ ಪೇಪರಿಗೆ ಸಹಿ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

ನಿಪಿ1 ರ ಎರಡನೇ ಪುಟದ ಕೊನೆಯ ಭಾಗದಲ್ಲಿ ಕೈಯಿಂದ ಅಕ್ಷರಗಳನ್ನು ಬರೆದು ನಂತರ ವೈಟನರ್ ಹಾಕಿ ಬೇರೆ ಪದಗಳನ್ನು ಮುದ್ರಿಸಿರುತ್ತಾರೆ ಎಂದರೆ ಸಾಕ್ಷಿದಾರರು ನನಗೆ ಗೊತ್ತಿರುವುದಿಲ್ಲ, ಪ್ರತಿವಾದಿ ಪರ

ವಕೀಲರು ತಯಾರಿಸಿರುತ್ತಾರೆ ಎನ್ನುವರು. ನಿಪಿ1 ರ ಎರಡನೇ ಪುಟದಲ್ಲಿ ಕನ್ನಡದಲ್ಲಿ ಈ ಪತ್ರದ ವ್ಯವಹಾರವನ್ನು ರದ್ದುಪಡಿಸಲಾಗಿರುತ್ತದೆ, ಯಾವುದೇ ಜಮೀನು ವ್ಯವಸಾಯಕ್ಕೆ ಯೋಗ್ಯವಲ್ಲ ಎಂದು ಪತ್ರವನ್ನು ರದ್ದುಪಡಿಸಿ ಪ್ರತಿವಾದಿಯ ಸಹಿಯನ್ನು ಪಡೆದುಕೊಂಡು, ನಂತರ ಸದರಿ ನಿಪಿ1 ದಾಖಲೆಯನ್ನು ನಾನೇ ಇಟ್ಟುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ1 ರ ಮೊದಲನೇ ಪುಟದಲ್ಲಿ ಪ್ರತಿವಾದಿ ಮತ್ತು ಅವರ ಮಗ ಹಾಗೂ ನಾನು ಸಹಿ ಮಾಡಿರುವುದಿಲ್ಲ ಎಂದರೆ ಸಾಕ್ಷಿದಾರರು ನನಗೆ ಗೊತ್ತಿರುವುದಿಲ್ಲ, ವಕೀಲರು ಕೊನೆಯಲ್ಲಿ ಸಹಿ ಮಾಡಲು ಹೇಳಿದ್ದರಿಂದ ಸಹಿ ಮಾಡಿರುತ್ತೇವೆ ಎನ್ನುವರು. ನಿಪಿ1 ರಲ್ಲಿ ಪ್ರತಿವಾದಿಯ ಮಗನ ಹೆಸರನ್ನು ಒಕ್ಕಣೆಯಲ್ಲಿ ನಮೂದು ಮಾಡಿರುವುದಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ. ನಿಪಿ1 ರ ಎರಡನೇ ಪುಟದಲ್ಲಿ ಅಗ್ರಿಮೆಂಟನ್ನು ರದ್ದುಪಡಿಸಿದ್ದು ಅದನ್ನು ತಿದ್ದುಪಡಿ ಮಾಡಿ ನಾನು ಮತ್ತು ದಸ್ತವೇಜು ಬರಹಗಾರರು ನಿಪಿ1 ನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ1 ರ ಎರಡನೇ ಪುಟದಲ್ಲಿ ಪ್ರತಿವಾದಿಯು ಸಹಿ ಮಾಡಿರುವುದನ್ನು ಇಟ್ಟುಕೊಂಡು ಉಳಿದ ಭಾಗಕ್ಕೆ ವೈಟನರ್ ಹಾಕಿ ನಂತರ ನಿಪಿ1 ನ್ನು ಟೈಪ್ ಮಾಡಿ ಅದನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಆ ರೀತಿ ವೈಟನರ್ ಹಾಕಿ ನಿಪಿ1 ನ್ನು ಟೈಪ್ ಮಾಡಿದ್ದರಿಂದ ಸಾಕ್ಷಿದಾರರ ಸಂಪೂರ್ಣ ವಿಳಾಸ ಬರೆಯಲು ನಿಪಿ1 ರ ಎರಡನೇ ಪುಟದಲ್ಲಿ ಸ್ಥಳ ಇರಲಿಲ್ಲ ಎಂದರೆ ಸಾಕ್ಷಿದಾರರು ಸಹಿ ಮಾಡಿರುತ್ತಾರೆ ಎನ್ನುವರು. ಸಾಕ್ಷಿದಾರರಾಗಿ ಪ್ರತಿವಾದಿಯ ಜೊತೆ ಬಂದಿರುವ ಇಬ್ಬರು ಸಹಿ ಮಾಡಿರುತ್ತಾರೆ. ನಿಮ್ಮ ಜೊತೆ ಬಂದಿದ್ದ ವ್ಯಕ್ತಿಗಳು ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರಾ ಎಂದರೆ ಸಾಕ್ಷಿದಾರರು ನನ್ನ ಜೊತೆ ಯಾರು ಬಂದಿರಲಿಲ್ಲ ಎನ್ನುವರು. ನನ್ನ ಜೊತೆ ಮರದ ವ್ಯಾಪಾರಕ್ಕೆ ಬಂದಿದ್ದ ಹಂಸಕ ರವರು ನಿಪಿ1 ಕ್ಕೆ ಸಹಿ ಮಾಡಿರುವುದಿಲ್ಲ. ಯಾವುದೇ ಕರಾರಿನ ಮೌಲ್ಯ ಹೆಚ್ಚಾಗಿದ್ದರೆ ನನ್ನ ಪರವಾಗಿಯೂ ಸಹ ಒಬ್ಬರನ್ನು ಸಾಕ್ಷಿದಾರರಾಗಿ ಸಹಿ ಮಾಡಿಸುತ್ತೇನೆ ಎಂದರೆ ಸಾಕ್ಷಿದಾರರು ಆ ದಿನ ನನ್ನ ಜೊತೆ ಯಾರು ಬಂದಿರುವುದಿಲ್ಲ ಎನ್ನುವರು. ನಿಪಿ1 ರ ಎರಡನೇ ಪುಟದಲ್ಲಿ ತಿದ್ದುಪಡಿಯಾಗಿದ್ದು ಬೇರೆ ಸ್ಟಾಂಪ್ ಪೇಪರನ್ನು ಪಡೆದುಕೊಂಡು ಪತ್ರ ಮಾಡಿದರೆ ಪ್ರತಿವಾದಿಯರ ಸಹಿ ಸಿಗುವುದಿಲ್ಲ ಎಂಬ ಕಾರಣಕ್ಕೆ ತಿದ್ದುಪಡಿ ಮಾಡಿರುವ ಸ್ಟಾಂಪ್ ಪೇಪರಿನ ಮೇಲೆ ನಿಪಿ1 ನ್ನು ನಾನು ಮತ್ತು ದಸ್ತವೇಜು ಬರಹಗಾರರು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿದಾರರು ಮುಂದುವರಿದು ಪ್ರತಿವಾದಿಯೇ ನಿಪಿ1 ನ್ನು ಮಾಡಿಕೊಟ್ಟಿರುತ್ತಾರೆ ಎನ್ನುವರು. ಪ್ರತಿವಾದಿಯರು ದಸ್ತಾವೇಜು ಬರಹಗಾರರ ಮುಂದೆ ನಿಪಿ1 ನ್ನು ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ1 ರಲ್ಲಿ ಹೇಳಿರುವ ಹಣಕಾಸು ವ್ಯವಹಾರ ಮೈಸೂರಿನಲ್ಲಿ ನಡೆದಿರುತ್ತದೆ. ನಿಪಿ1 ಕ್ಕೆ ಮೊದಲು ಪ್ರತಿವಾದಿ ಸಹಿ ಮಾಡಿದ್ದು, ನಂತರ ನಾನು ಪ್ರತಿವಾದಿಗೆ ಹಣ ನೀಡಿ ಸಹಿ ಮಾಡಿರುತ್ತೇನೆ. ನಿಪಿ1 ರಲ್ಲಿ ಬರೆದಿರುವ ವಿಚಾರವನ್ನು ವಕೀಲರು ನನಗೆ ಓದಿ ಹೇಳಿರುತ್ತಾರೆ. ನಿಪಿ1 ರಲ್ಲಿ ದಾವಆಸ್ತಿಯು ಪಿತ್ರಾರ್ಜಿತವಾಗಿ ಬಂದಿರುವ ಆಸ್ತಿ ಎಂದು ನಮೂದಿಸಿರುತ್ತಾರೆ ಎಂದರೆ ಸರಿಯಲ್ಲ. ನಿಪಿ1 ರಲ್ಲಿ 200 ತೇಗದ ಮರ ಎಂದು ನಮೂದಿಸಿದ್ದು, ನಿಪಿ2 ರಲ್ಲಿ 250 ತೇಗದ ಮರ ಎಂದು ನಮೂದಾಗಿರುತ್ತದೆ ಎಂದರೆ ಸಾಕ್ಷಿದಾರರು ನನಗೆ ಮಾರಾಟ ಮಾಡಿರುವುದು 200 ತೇಗದ ಮರ ಎನ್ನುವರು. ಒಂದು ವೇಳೆ 250 ತೇಗದ ಮರಗಳ ಪೈಕಿ 200 ತೇಗದ ಮರಗಳು ಎಂದು ನಮೂದಿಸಿದ್ದರೆ ನಿಪಿ1 ರ 2 ನೇ ಪುಟದಲ್ಲಿ ಸ್ಥಳ ಸಾಕಾಗುತ್ತಿರಲಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ.

ನಾನು ಕಳೆದ 12 ವರ್ಷಗಳಿಂದ ಗುಂಡ್ಲುಪೇಟೆಯ ಬೇಗೂರಿಗೆ ಬಂದು ಹೋಗುತ್ತಿದ್ದೇನೆ. ಗುಂಡ್ಲುಪೇಟೆಯ ಬೇಗೂರಿನಲ್ಲಿ ನನ್ನ ವಿರುದ್ಧ ಹಲವಾರು ಕ್ರಿಮಿನಲ್ ಪ್ರಕರಣ ದಾಖಲಾಗಿರುತ್ತದೆ ಎಂದರೆ ಸರಿಯಲ್ಲ. ನಾನು ಕ್ರಿಮಿನಲ್ ಪ್ರಕರಣದಲ್ಲಿ ಜೈಲಿಗೆ ಹೋಗಿ ಬಂದಿರುತ್ತೇನೆ ಎಂದರೆ ಸರಿಯಲ್ಲ. ನಾನು ದಾವಆಸ್ತಿಯಲ್ಲಿ ತೇಗದ ಮರಗಳನ್ನು ನೋಡಿ ನಿಪಿ1 ರಂತೆ ಸುಳ್ಳು ದಾಖಲೆಯನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಸಾಕ್ಷಿದಾರರು ಅನಾರೋಗ್ಯವಿರುತ್ತದೆ ಎಂದು ಹೇಳಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.

(ಸಾಕ್ಷಿಯು ತಮಿಳಿನಲ್ಲಿ ನುಡಿದ ನುಡಿ ಸಾಕ್ಷಿಯನ್ನು ಭಾಷಾಂತರಕಾರರಾದ ವೇಲುಸ್ವಾಮಿ, ವಕೀಲರು ಕನ್ನತಕ್ಕೆ ತರ್ಜುಮೆ ಮಾಡಿ ಹೇಳಿದ್ದು, ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.